| | | | |
|---|---|---|---|
| 5447 | TVTBJ-8 | ಗಣಪತಿ ಬಿನ್ ಕನ್ನಪ್ಪ ಹರಿಜನ ಕಾಲೋನಿ | ತಲವಾಟ |
| 5448 | TVTBJ-9 | ಮಾದೇವಿ ಕೋಂ ಪುಟ್ಟಪ್ಪ ಹರಿಜನ ಕಾಲೋನಿ | ತಲವಾಟ |
| 5449 | HRLKJ-1 | ಗಣೇಶ ಬಿನ್ ಮಂಜಪ್ಪ ಹೆನ್ನಿಬಯಲು | ಹಾರುವಳ್ಳಿ |
| 5450 | HRLKJ-2 | ಸುಬ್ಬಾಯ ಬಿನ್ ಬೀಮಣ್ಣ | ಹಾರುವಳ್ಳಿ |
| 5451 | ELKJ-2 | ರಾಮಣ್ಣ ಬಿನ್ ಭೀಮಣ್ಣ | ಇಡುವಾಣಿ |
| 5452 | ELKJ-3 | ರಾಮ ಬಿನ್ ಸೋಮು ಕೊಕೊಡು | ಇಡುವಾಣಿ |
| 5453 | ELKJ-1 | ಮಂಜಪ್ಪ ಕೋಂ ತಿಮ್ಮನಾಯ್ಕ ಚಿಪ್ಪಳೆ ಮಕ್ಕಿ | ಇಡುವಾಣಿ |

2123 (1924) – ಶೀ ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬ (ಬಸವ ಕಲ್ಯಾಣ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವವರೇ ?

ಅ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ಮಿತಿಗೊಳಿಸಿರುವುದರಿಂದ ರೈತರಿಗೆ ತೊಂದರೆಯಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಅದರ ಬದಲು ಸಮಯ ನಿಗದಿಪಡಿಸಿರುವುದರಿಂದ ರೈತರಿಗೆ ಅನುಕೂಲವಾಗಿರುವುದರಿಂದ ಈ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗುವುದೇ ;

ಇ) ಭಾಗ್ಯಜ್ಯೋತಿಯಡಿಯಲ್ಲಿ ಕಡು ಬಡವರಿಗೆ ಕೊಡಲಾಗುತ್ತಿದ್ದ ವಿದ್ಯುಚ್ಛಕ್ತಿಗೆ ಸರ್ಕಾರ ಮೀಟರ್ ಅಳವಡಿಸಿರುವುದರ ವಿರುದ್ದ ರಾಜ್ಯಾದ್ಯಂತ ವಿರೋಧ ವ್ಯಕ್ತವಾಗಿರುವ ವಿಷಯದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮವೇನು;

ಈ) ಟ್ರಾನ್ಸಾಫಾರ್ಮರ್‌ಗಳು ಸುಟ್ಟು ಹೋದಲ್ಲಿ ಅವುಗಳ ಸ್ಥಳದಲ್ಲಿ 36 ಗಂಟೆಗಳಲ್ಲಿ ಹೊಸ ಟ್ರಾನ್ಸಾಫಾರ್ಮರ್ ಅಳವಡಿಸುವ ವ್ಯವಸ್ಥೆ ಮಾಡುವುದಾಗಿ ಸರ್ಕಾರ ಘೋಷಿಸಿದ್ದರೂ ಟ್ರಾನ್ಸಾಫಾರ್ಮರ್‌ಗಳನ್ನು ಅಳವಡಿಸುತ್ತಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಕಳಪೆ ಮಟ್ಟದ ಟ್ರಾನ್ಸಾಫಾರ್ಮರ್‌ಗಳು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸರಬರಾಜಾಗಿ ಸುಟ್ಟು ಹೋಗುತ್ತಿರುವುದರಿಂದ ಇದಕ್ಕೆ ಕಾರಣರಾದವರ ವಿರುದ್ದ ಸರ್ಕಾರವು ಕೈಗೊಳ್ಳುವ ಕಟ್ಟುನಿಟ್ಟಿನ ಕ್ರಮವೇನು ?

ಶೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)–

ಅ) ಮತ್ತು ಆ) ಪ್ರಸ್ತುತ ರಾಜ್ಯಾದ್ಯಾಂತ ಗ್ರಾಮಾಂತರ ಪ್ರದೇಶಗಳಲ್ಲಿನ ನೀರಾವರಿ ಪಂಪುಸೆಟ್ಟುಗಳಿಗೆ ಪ್ರತಿ ದಿನ 9 ಗಂಟೆಗಳ ಅವಧಿಗೆ 3 ಪೇಸ್‌ನಲ್ಲಿ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತದೆ. ಆದರೆ, ಕೆಲವೆಡೆ ವಿದ್ಯುತ್ ಸಬ್ ಸ್ಟೇಷನ್ ಮತ್ತು ವಿದ್ಯುತ್ ಪ್ರಸರಣ ಮಾರ್ಗಗಳ ಸಾಮರ್ಥ್ಯಗಳ ಇತಿ ಮಿತಿಗಳಿಂದಾಗಿ 9 ಗಂಟೆಗಳ ಅವಧಿಗೆ 3 ಪೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ರಾಜ್ಯವು ಎದುರಿಸುತ್ತರಿವ ವಿದ್ಯುತ್ ಕೊರತೆ ಪರಿಸ್ಥಿತಿಯಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ನಿರ್ವಹಣೆ ಅನಿವಾರ್ಯವಾಗಿರುತ್ತದೆ. ದಿನವಿಹಿ ವಿದ್ಯುತ್ ಬಳಕೆಯನ್ನು ಸರಾಸರಿ 108 ದಶಲಕ್ಷ ಯೂನಿಟ್ಟುಗಳಿಗೆ ನಿಯಂತ್ರಿಸಬೇಕಾಗಿರುತ್ತದೆ. ಆದುದರಿಂದ ಪ್ರತಿಯೊಂದು ಸಬ್ ಸ್ಟೇಷನ್‌ಗೆ ವಿದ್ಯುತ್ ಹಂಚಿಕೆಯನ್ನು ಮಾಡಿ, ವಿದ್ಯುತ್ ಬಳಕೆಯನ್ನು ಮಾಡಲಾದ ಹಂಚಿಕೆಗೆ ಮಿತಿಗೊಳಿಸಬೇಕಾಗಿರುತ್ತದೆ.

ಇ) ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಯೋಜನೆಗಳಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವ ಬಡವರ ಮನೆಗಳಿಗೆ ವಿದ್ಯುತ್ ಮೀಟರುಗಳನ್ನು ಅಳವಡಿಸಲು, ಫಲಾನುಭವಿಗಳಿಂದ ಮೀಟರ್‌ಗೆ ತಗಲುವ ಹಣವನ್ನು ಭರಿಸುಕೊಳ್ಳದೇ, ವಿದ್ಯುತ್ ಸರಬರಾಜು ಕಂಪನಿಗಳು ತಮ್ಮ ಖರ್ಚಿನಲ್ಲಿಯೇ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಿತ್ತಿರುವುದರಿಂದ, ಇದು ಬಡವರಿಗೆ ಹೊರೆಯಾಗುವುದಿಲ್ಲ. ಅಲ್ಲದೇ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ ಮೀಟರುಗಳನ್ನು ಅಳವಡಿಸಿದರೂ ಸಹ ಪ್ರತಿ ತಿಂಗಳು 18 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ತನ್ನು ಒಸಗಿಸಲು ಸರ್ಕಾರವು ಈಗ ಆದೇಶವನ್ನು ನೀಡಿರುತ್ತದೆ. ಆದುದರಿಂದ, ಈ ಸೌಲಭ್ಯವನ್ನು ಪಡೆದುಕೊಳ್ಳಲು ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗೆ ವಿದ್ಯುತ್ ಮೀಟರುಗಳ ಅಳವಡಿಕೆಯು ಕಡ್ಡಾಯವಾಗಿರುತ್ತದೆ. ವಿದ್ಯುತ್ ಕ್ಷೇತ್ರದಲ್ಲಿನ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಸ್ಪಷ್ಟವಾಗಿ ನಿರ್ಣಯಿಸಲು ಮಾಡಲಾಗುತ್ತಿರುವ 'ಎನರ್ಜಿ ಆಡಿಟ್' ವ್ಯವಸ್ಥೆಯನ್ನು ಕೈಗೊಳ್ಳಲು ಹಾಗೂ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜನ್ನು ಮಾಡಲಾಗುತ್ತಿರುವ ವಿದ್ಯುತ್ ಸ್ಥಾವರಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಸಹಾಯ ಧನವನ್ನು ನಿರ್ದಿಷ್ಟವಾಗಿ ನಿಗದಿಪಡಿಸಲು ಪ್ರತಿಯೊಂದು ವಿದ್ಯುತ್ ಸ್ಥಾವರಕ್ಕೂ ಮೀಟರನ್ನು

ಅಳವಡಿಸುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಸರ್ಕಾರದ ನೀತಿಯಂತೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳೂ ಸೇರಿದಂತೆ ಮೀಟರ್ ರಹಿತ ವರ್ಗಗಳ ಎಲ್ಲಾ ವಿದ್ಯುತ್ ಸ್ಥಾವರಗಳಿಗೆ "ಯೂನಿವರ್ಸಲ್ ಮೀಟರಿಂಗ್ ಕಾರ್ಯಕ್ರಮ" ದಡಿ ಮೀಟರುಗಳನ್ನು ಅಳವಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ) ಸಾಮಾನ್ಯವಾಗಿ, ವಿತರಣಾ ಟ್ರಾನ್ಸಾಫಾರ್ಮರ್‌ಗಳು ವಿಫಲಗೊಂಡಲ್ಲಿ ಅವುಗಳನ್ನು ಆದಷ್ಟು ಶೀಘ್ರಗತಿಯಲ್ಲಿ ಬದಲಾಯಿಸಲಾಗುತ್ತದೆ. ಆದರೆ, ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ, ಟ್ರಾನ್ಸಾಫಾರ್ಮರ್‌ಗಳನ್ನು ವಾಹನಗಳ ಮೂಲಕ ಕೊಂಡೊಯ್ಯಲು ಸರಿಯಾದ ರಸ್ತೆ ಸೌಲಭ್ಯ ಇಲ್ಲದಿರುವ ಸ್ಥಳಗಳಲ್ಲಿ ವಿಫಲಗೊಳ್ಳುವ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸುವ ಪ್ರಕರಣಗಳಲ್ಲಿ ಟ್ರಾನ್ಸಾಫಾರ್ಮರ್‌ಗಳು ಕೆಲವೊಮ್ಮೆ ತಕ್ಷಣವೇ ಲಭ್ಯವಾಗದಿರುವ ಸಂದರ್ಭಗಳಲ್ಲಿ ಹಾಗೂ ರಜೆ ದಿನಗಳು ಬಂದ ಸಮಯಗಳಲ್ಲಿ ವಿಫಲಗೊಳ್ಳುವ ಟ್ರಾನ್ಸಾಫಾರ್ಮರ್‌ಗಳನ್ನು ಬದಲಾಯಿಸುವಲ್ಲಿ ಸ್ವಲ್ಪ ವಿಳಂಬವಾಗುವ ಸಂಭವವಿರುತ್ತದೆ. ಆದಾಗ್ಯೂ ವಿಫಲಗೊಳ್ಳುವ ಟ್ರಾನ್ಸಾಫಾರ್ಮರ್‌ಗಳನ್ನು ನಿಗದಿತ ಅವಧಿಯೊಳಗೆಯೇ ಬದಲಾಯಿಸಲು ವಿದ್ಯುತ್ ಸರಬರಾಜು ಕಂಪನಿಗಳು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿವೆ.

ಉ) ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯು ಗುಣಮಟ್ಟದ ಹೊಸ ಟ್ರಾನ್ಸಾಫಾರ್ಮರ್‌ಗಳನ್ನು ಖರೀದಿಸುತ್ತಿದ್ದು, ಯಾವುದೇ ಕಳಪೆ ಮಟ್ಟದ ಟ್ರಾನ್ಸಾಫಾರ್ಮರ್‌ಗಳನ್ನು ಖರೀದಿಸಿ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಅಳವಡಿಸಿರುವುದಿಲ್ಲ. ಬಹುತೇಕ ಸಂದರ್ಭಗಳಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಬಳಕೆಯಿಂದ ಟ್ರಾನ್ಸಾಫಾರ್ಮರ್‌ಗಳು ಓವರ್ ಲೋಡ್‌ನಿಂದ ಸುಟ್ಟು ಹೋಗುತ್ತಿದೆಯೇ ಹೊರತು ಟ್ರಾನ್ಸಾಫಾರ್ಮರ್‌ಗಳಲ್ಲಿನ ತಾಂತ್ರಿಕ ದೋಷಗಳಿಂದ ಟ್ರಾನ್ಸಾಫಾರ್ಮರ್‌ಗಳು ಸುಟ್ಟು ಹೋಗಿರುವುದಿಲ್ಲ. ಆದುದರಿಂದ, ವಿದ್ಯುತ್ ಸರಬರಾಜು ಕಂಪನಿಯು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ.